**◆ ಉತ್ಕೃಷ್ಟ ವೈದ್ಯಕೀಯ ಸೌಲಭ್ಯ, ತಂತ್ರಜ್ಞಾನ ಕ್ಷೇತ್ರದಲ್ಲಿ ಜಗತ್ತು ಮಿಂಚಿನ ವೇಗದಲ್ಲಿ ಬೆಳೆಯುತ್ತಿರುವಾಗ ನಾವು ಈಗ ಆಯುರ್ವೇದ, ಪಾರಂಪರಿಕ ಶಿಕ್ಷಣ ಹೇಳಿಕೊಟ್ಟರೆ ಸ್ಪರ್ಧಾತ್ಮಕತೆಗೆ ಮಕ್ಕಳನ್ನು ಅಣಿಗೊಳಿಸುದು ಸಾಧ್ಯವೇ?**

ಭಾರತೀಯ ವೈದ್ಯಕೀಯ, ವಾಸ್ತು ಪದ್ಧತಿ ಮತ್ತು ಜೀವನಶೈಲಿಯನ್ನು ಯುರೋಪಿಯನ್ನರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಿದ್ದಾರೆ. ಸರಳ ಜೀವನ, ಯೋಗ, ಪ್ರಾಣಾಯಾಮ, ಕಡಿಮೆ ಊಟ, ಕಡಿಮೆ ಸಂಪತ್ತು ಗಳಿಕೆ – ಹೀಗೆ ಭಾರತದ ಸಂತುಷ್ಟ ಜೀವನ ಪದ್ಧತಿಯನ್ನು ಗಾಢವಾಗಿ ಅಧ್ಯಯನ ಮಾಡುತ್ತಿದ್ದಾರೆ. ಪ್ರಗತಿ ಎಂದರೆ ಎತ್ತರಕ್ಕೇರುವುದು, ಓಡುವುದು, ಸಂಪತ್ತು ಸಂಗ್ರಹ ಮಾಡುವುದು ಅಲ್ಲ. ಪ್ರಗತಿಯೆಂದರೆ ಸುಂದರ ಹಾಗೂ ನೆಮ್ಮದಿಯ ಬದುಕು ಸಾಗಿಸುವುದು. ನಮ್ಮ ಸುತ್ತಲಿನ ಜಗತ್ತು ಸುಖದಿಂದ ಬದುಕಬೇಕು ಎನ್ನುವುದು ಭಾರತದ ಜೀವನ ಪದ್ಧತಿ. ಮಕ್ಕಳಿಗೆ ಬದುಕಿನ ಮೂಲ ಕಲ್ಪನೆಗಳನ್ನು ಕಲಿಸುವುದು ಹೊಸ ಶಿಕ್ಷಣ ಪದ್ಧತಿಯ ಉದ್ದೇಶವಾಗಿದೆ.

**◆ ಐದನೇ ತರಗತಿವರೆಗೆ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಬೇಕು ಎಂದು ಶಿಕ್ಷಣ ನೀತಿಯಲ್ಲಿ ಹೇಳಲಾಗಿದೆ. ಎಲ್ಲ ಭಾಷೆಗಳ ಜನರು ಇರುವ ಕರ್ನಾಟಕದಂಥ ರಾಜ್ಯದಲ್ಲಿ ಮಕ್ಕಳ ಶಿಕ್ಷಣ ಮಾಧ್ಯಮದ ಆಯ್ಕೆ ಹೇಗೆ?**

ಭಾಷೆಯ ಆಯ್ಕೆ ಒಂದು ದೊಡ್ಡ ಪ್ರಶ್ನೆಯೂ ಹೌದು, ಸರಳವೂ ಹೌದು. ಅನೇಕ ಕನ್ನಡಿಗರಿಗೆ ಹಿಂದಿ, ತೆಲುಗು ಬರುತ್ತದೆ. ಅನೇಕ ತೆಲುಗು ಭಾಷಿಕರಿಗೆ ಕನ್ನಡವೂ ಬರುತ್ತದೆ. ಆದ್ದರಿಂದ ಎಲ್ಲ ಪೋಷಕರು ಆಯಾ ರಾಜ್ಯಗಳ ಸ್ಥಳೀಯ ಭಾಷೆಗಳನ್ನು ಗೌರವಿಸಿ ಮಕ್ಕಳಿಗೆ ಅಲ್ಲಿನ ಭಾಷೆಯಲ್ಲಿ ಶಿಕ್ಷಣ ಕೊಡಿಸಬೇಕು. ಸ್ಥಳೀಯ ಭಾಷೆಯೇ ಆದ್ಯತೆಯಾಗಬೇಕು.

**◆ ಮಾತೃಭಾಷೆ ಆಯ್ಕೆ ಬಗ್ಗೆ ಶಿಕ್ಷಣ ನೀತಿಯಲ್ಲಿ ಸ್ಪಷ್ಟವಾಗಿ ಏನಿದೆ?**

ಮಾತೃಭಾಷೆ ಆಯ್ಕೆಯ ಬಗ್ಗೆ ಶಿಕ್ಷಣ ನೀತಿಯಲ್ಲಿ ಅತ್ಯಂತ ಸ್ಪಷ್ಟವಾಗಿ ಹೇಳಲಾಗಿದೆ. ಮಧ್ಯಪ್ರದೇಶದ ರಾಜ್ಯಭಾಷೆ ಹಿಂದಿ. ಆದರೆ, ಅಲ್ಲಿನ ಬೈಗಾ ಆದಿವಾಸಿಗಳು ಬೈಗಾವನ್ನು, ಗೊಂಡಾ ಆದಿವಾಸಿಗಳು ಗೊಂಡಿ ಭಾಷೆಯನ್ನು ಮಾತನಾಡುತ್ತಾರೆ. ದೊಡ್ಡ ಪ್ರಮಾಣದಲ್ಲಿ ಒಂದೇ ಭಾಷೆ ಮಾತನಾಡುವ ಜನರಿದ್ದರೆ ಅವರಿಗೆ



ಅದೇ ಭಾಷೆಯಲ್ಲಿ ಶಿಕ್ಷಣ ಕೊಡಬೇಕು ಎಂದು ಹೇಳಲಾಗಿದೆ. ಛತ್ತೀಸಗಡ ಮತ್ತು ಮಧ್ಯಪ್ರದೇಶದ ಬುಡಕಟ್ಟು ಜನರಿಗೆ ಮಾತೃಭಾಷೆಯಲ್ಲಿ ಈಗಾಗಲೇ ಶಿಕ್ಷಣ ನೀಡಲಾಗುತ್ತದೆ.

**◆ ತರಗತಿಗಳಲ್ಲಿ ಕಲಿಯುವ ವಿದ್ಯೆಗೂ ವೃತ್ತಿಯಲ್ಲಿ ಯಶಸ್ಸು ಸಾಧಿಸಲು ಬೇಕಾಗುವ ಶಿಕ್ಷಣಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಈ ಅಂತರ ಕಡಿಮೆ ಮಾಡಲು ಶಿಕ್ಷಣ ನೀತಿಯಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ?**

ಈ ಪ್ರಶ್ನೆ ರಾಷ್ಟ್ರೀಯ ಶಿಕ್ಷಣ ನೀತಿಯ ಹೃದಯಕ್ಕೆ ಸಂಬಂಧಿಸಿದ್ದು. ಪ್ರಾಥಮಿಕ ಶಿಕ್ಷಣ ಕೇವಲ ಬೋಧನೆ ಆಧಾರಿತ ಇರಬಾರದು. ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಕಲಿಯಬೇಕು. ಶಿಕ್ಷಕರು ಕೆಲಸ ಮಾಡುವ ಪದ್ಧತಿ ತಿಳಿಸಿಕೊಡಬೇಕು. ಪ್ರಾಯೋಗಿಕತೆಗೆ ಹೆಚ್ಚು ಒತ್ತು ನೀಡದ ಕಾರಣ ತಾಂತ್ರಿಕ ಶಿಕ್ಷಣ ನಮ್ಮ ದೇಶದಲ್ಲಿ ದೊಡ್ಡ ವೈಫಲ್ಯ ಕಂಡಿದೆ. ಶಿಕ್ಷಣ ನೀತಿಯಲ್ಲಿ ವೃತ್ತಿಪರ ಕೋರ್ಸ್‌ಗಳಿಗೆ ಶೇ 50ರಷ್ಟು, ಪ್ರಾಯೋಗಿಕ ಶಿಕ್ಷಣಕ್ಕೆ ಶೇ 50ರಷ್ಟು ಆದ್ಯತೆ ಕೊಡಬೇಕು ಎಂದು ಹೇಳಲಾಗಿದೆ.

ಅಷ್ಟೇ ಅಲ್ಲದೆ, ಬೋಧನೆ ಏಕಮುಖಿಯಾಗಿರದೆ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಲು ಪ್ರೋತ್ಸಾಹ ಕಲ್ಪಿಸಬೇಕು. ಶಿಕ್ಷಕರು ಮಾರ್ಗದರ್ಶಕರಷ್ಟೇ ಅಲ್ಲ, ಪ್ರಶ್ನೆ ಕೇಳಲು ಸ್ಫೂರ್ತಿ ತುಂಬುವ ಪೋಷಕರಾಗಬೇಕು. ಮಕ್ಕಳು ಅಸಂಬದ್ಧ ಪ್ರಶ್ನೆಗಳನ್ನು ಕೇಳಿದರೂ ಪರವಾಗಿಲ್ಲ. ಮೊದಲು ಪ್ರಶ್ನಿಸುವ ಕೌಶಲ ಬೆಳೆಸಬೇಕು. ಶಿಕ್ಷಕ ಮಗುವಿನ ಕುತೂಹಲ ತಣಿಸಬೇಕು ಎಂಬುದು ಶಿಕ್ಷಣ ನೀತಿಯ ಉದ್ದೇಶ.

**◆ ಬಹಳಷ್ಟು ವಿಶ್ವವಿದ್ಯಾಲಯಗಳು ಸರ್ಟಿಫಿಕೇಟ್ ಆಧಾರಿತ ಕೋರ್ಸ್‌ಗಳನ್ನು ನಡೆಸುತ್ತಿವೆ. ಅವುಗಳ ಪರಿಸ್ಥಿತಿ ಏನು?**

ಸರ್ಟಿಫಿಕೇಟ್ ಆಧಾರಿತ ಕೋರ್ಸ್‌ಗಳನ್ನು ನಡೆಸುವ ವಿಶ್ವವಿದ್ಯಾಲಯಗಳು ಉಳಿಯಬೇಕಾದರೆ ಅವು ಹೊಸತನಕ್ಕೆ ಹೊಂದಿಕೊಳ್ಳಬೇಕು. ಕಾಲದ ಅಗತ್ಯತೆಗೆ ಅನುಗುಣವಾಗಿ ವಿ.ವಿ.ಗಳು ಕೂಡ ಮಗ್ಗಲು ಬದಲಿಸಬೇಕು.

**◆ ಹೊಸ ಶಿಕ್ಷಣ ನೀತಿ ಪರಿಣಾಮಕಾರಿ ಅನುಷ್ಠಾನದಲ್ಲಿ ಪೋಷಕರ ಜವಾಬ್ದಾರಿಯೇನು?**

ಶಿಕ್ಷಣ ನೀತಿಯಲ್ಲಿ ಪಾಲಕರ ಪಾಲ್ಗೊಳ್ಳುವಿಕೆಗೆ ಮಹತ್ವ ನೀಡಲಾಗಿದೆ. ಪಾಲಕರು ಮೊದಲು ಶಿಕ್ಷಣನೀತಿ ಹೊಂದಿರುವ ಮೌಲ್ಯಗಳನ್ನು ತಿಳಿದುಕೊಳ್ಳಬೇಕು. ತಾಯಿಯೇ ಮೊದಲ ಗುರು ಎನ್ನುವುದು ನಮ್ಮ ಶಿಕ್ಷಣ ಪದ್ಧತಿಯಲ್ಲಿ ರೂಢಿಗತವಾಗಿ ಬಂದಿದೆ. ತಂದೆ–ತಾಯಿಗೆ ದೇಶದ ಬಗ್ಗೆ ಸರಿಯಾದ ಪರಿಚಯವಿಲ್ಲದಿದ್ದರೆ ಮಕ್ಕಳಿಗೆ ಹೇಳಿಕೊಡಲು ಆಗುವುದಿಲ್ಲ. ಮನೆಯಲ್ಲಿ ಪಾಠಗಳನ್ನು ಹೇಳಿಕೊಟ್ಟರೆ ಮಕ್ಕಳು ಕೊನೆಯತನಕ ಮರೆಯುವುದಿಲ್ಲ. ಮಗುವಿನ ಮುಗ್ಧ ಹಾಗೂ ಮುಕ್ತ ಮನಸ್ಸು ಪೋಷಕರು ಹೇಳುವ, ಮಾಡುವ ಮತ್ತು ಶಿಕ್ಷಕರು ಬೋಧಿಸುವ ಜೀವನ ಮೌಲ್ಯಗಳನ್ನು ಪಾಲಿಸುತ್ತದೆ.

**◆ ಶಿಕ್ಷಕರ ಗುಣಮಟ್ಟ ಸುಧಾರಿಸದ ಹೊರತು ಮಕ್ಕಳ ಜ್ಞಾನಮಟ್ಟ ಹೆಚ್ಚಿಸಲು ಸಾಧ್ಯವೇ?**

ಶಿಕ್ಷಕರ ಗುಣಮಟ್ಟದ ಬಗ್ಗೆ ವಿಶೇಷ ಒತ್ತು ಕೊಡಲಾಗಿದೆ. ನಿವೃತ್ತಿಯಾಗುವ ತನಕ ಅವರ ಜ್ಞಾನಮಟ್ಟವನ್ನು ನಿರಂತರವಾಗಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಶಿಕ್ಷಣ ನೀತಿಯಲ್ಲಿ ಶಿಕ್ಷಕರಿಗೆ ಕೇವಲ ಬುದ್ಧಿಮಾತು ಹೇಳಿ ಸುಮ್ಮನಾಗಿಲ್ಲ. ಅವರು ಕಲಿಯಲು ಬೇಕಾದ ಪೂರಕ ತರಬೇತಿ ಕೇಂದ್ರಗಳನ್ನು ಗ್ರಾಮ ಮಟ್ಟದಿಂದ ಸ್ಥಾಪಿಸಬೇಕು. ಶಿಕ್ಷಕರನ್ನು ಶೈಕ್ಷಣಿಕ ಚಟುವಟಿಕೆ ಹೊರತುಪಡಿಸಿ ಬೇರೆ ಯಾವ ಕೆಲಸಕ್ಕೂ ನಿಯೋಜಿಸಬಾರದು ಎಂದು ಒತ್ತಿ ಹೇಳಲಾಗಿದೆ. ■

**◆ ಮಕ್ಕಳಿಗೆ ಗ್ರಾಮೀಣ ಭಾರತ ಗೊತ್ತಾಗಬೇಕು ಎನ್ನುವುದು ಶಿಕ್ಷಣ ನೀತಿಯ ಪ್ರಮುಖ ಆಶಯ ಎಂದು ವರದಿಯಲ್ಲಿ ಹೇಳಲಾಗಿದೆ. ಪ್ರಾಯೋಗಿಕವಾಗಿ ಇದು ಹೇಗೆ ಸಾಧ್ಯ?**

ಭಾರತದಲ್ಲಿ ಈಗ ಜಾತಿಗೂ ಕಲಿಯುವ ವಿದ್ಯೆಗೂ ಸಂಬಂಧ ಬಹಳ ದೂರವಾಗಿದೆ. ಉದಾಹರಣೆಗೆ ಕುಂಬಾರಿಕೆಯನ್ನು ಕುಂಬಾರನ ಮಗನೇ ಕಲಿಯಬೇಕು ಎಂದೇನಿಲ್ಲ. ಚಮ್ಮಾರನ ಮಗ ವೈದ್ಯ ಆಗಬಹುದು. ಕೋಲ್ಕತ್ತದಲ್ಲಿ ಚರ್ಮೋದ್ಯಮ ಮಾರ್ವಾಡಿಗಳ ಕೈಯಲ್ಲಿದೆ. ಉತ್ತರ ಪ್ರದೇಶದಲ್ಲಿ ಚರ್ಮದ ಹದಗಾರಿಕೆ ಮಾಡುವ ಕೆಲಸ ದಲಿತರ ಕೈಯಲ್ಲಿ ಇಲ್ಲ. ಕುಂಬಾರಿಕೆ ಕೇವಲ ಒಂದು ಕಸುಬಲ್ಲ. ಅದು ಸೃಜನಾತ್ಮಕ ಉದ್ಯೋಗವಾಗಿ, ಕಲೆಯಾಗಿ ಬದಲಾಗಿದೆ. ವಸ್ತ್ರವಿಜ್ಞಾನ ಕಲಿಸಲು ಬಹಳಷ್ಟು ವಿಶ್ವವಿದ್ಯಾಲಯಗಳಲ್ಲಿ ವೃತ್ತಿಪರ ಕೋರ್ಸ್‌ಗಳಿವೆ. ಗ್ರಾಮೀಣ ಭಾರತದ ಅನುಭವ ನೀಡುವ ಜೊತೆಗೆ ವೃತ್ತಿಪರ ಜ್ಞಾನಕ್ಕೂ, ಉದ್ಯೋಗ ಕೌಶಲಕ್ಕೆ ಒತ್ತು ಕೊಡುವ ಉದ್ದೇಶ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯದ್ದು.